A.—Sri S. NIJALINGAPPA (Chief Minister).—

(*a*) Yes.

(*b*) It is not permissible to treat the absence as Casual leave under the Rules.

N. G. O's Strike

*Q—523. Sri B. P. GANGADHAR (Tumkur).—

Will the Chief Minister be pleased to state :—

(*a*) the number of days the Non-Gazetted Officers were on strike and why ;

(*b*) whether Government would treat those days of strike as leave and confer all benefits to them ?

A.—Sri S. NIJALINGAPPA (Chief Minister).—

(*a*) A few N. G. O's were on strike for three days to press their demands.

(*b*) No. This is not permissible under the rules.

N. G. O's Absence

*Q.—538. Smt. W. F. FERNANDES (Coondapur).—

Will the Chief Minister be pleased to state :—

(*a*) the reasons for not taking any decision about the issue of three days absence from duty by the Non-Gazetted Officers during January 1967 even after 3 months ;

(*b*) whether Government would take early decision on this issue ?

A.—Sri S. NIJALINGAPPA (Chief Minister).—

(*a*) Absence will be dealt with as per rules.

(*b*) Does not arise.

ಶ್ರೀ ಎನ್. ಎ. ಚೆನ್ನೇಗೌಡ.—ಎಷ್ಟು ಮಂದಿ ಕಚೇರಿಗೆ ಬಂದಿದ್ದರು ? ಎಷ್ಟು ಮಂದಿ ಬಂದಿರಲಿಲ್ಲ ?

†ಶ್ರೀ ಎಸ್. ನಿಜಲಿಂಗಪ್ಪ.—ಹಾಜರಿದ್ದವರು ಬಹಳ ಜನ. ಎಷ್ಟು ಜನ ಹೋಗಿದ್ದರು ಎಂಬ ಅಂಕಿಅಂಶ ಇಲ್ಲ, ಬಹಳ ಜನ ಹೋಗಿದ್ದರು.

Sri M. S. KRISHNAN.—Are the Government aware that there is simmering discontent due to the non-settlement of the question of three

days absence and that it will lead to another strike unless their legitimate demandes are conceded ? If so, what action are Government going to take ?

Sri S. NIJALINGAPPA.—I know that they have been appealing to Government that these 3 days absence may be treated as casual leave. I am not aware of any threatened strike or any such thing. My friend seems to know much more about it than myself.

Sri M. S. KRISHNAN.—I think they have passed a resolution. I would like to know whether this 3 days absence is going to be condoned or not.

Sri S. NIJALINGAPPA.—I know that they have been requesting Government. I am not aware of any threatened strike.

ಶ್ರೀ ವಾಟಾಳ್ ನಾಗರಾಜ್.—ತಾವು ನನ್ನ ಪ್ರಶ್ನೆಗೆ ಉತ್ತರವಾಗಿ ನಾನ್-ಗೆಜೆಟೆಡ್ ನೌಕರರುಗಳ ಮೂರು ದಿನಗಳ ಗೈರು ಹಾಜರಿಯನ್ನು ನಿಯಮಗಳ ಮೇರೆಗೆ ಮುಷ್ಕರ ಹೂಡಿದ್ದ ದಿನಗಳೆಂದು ಪರಿಗಣಿಸರಾಗಿದೆ ಎಂದು ಹೇಳಿದ್ದೀರಿ, ಆ ನಿಯಮವನ್ನು ತಿದ್ದುಪಡಿ ಮಾಡಿ ಆ ಮೂರು ದಿನಗಳನ್ನೂ ರಜಾ ದಿನಗಳೆಂದು ಪರಿಗಣನೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಈಗಿರುವ ಕಾನೂನು ಪ್ರಕಾರ ಸರ್ಕಾರದವರು ಆ ಮೂರು ದಿನಗಳನ್ನು ಕ್ಯಾಷ್ಯುಯರ್ ಲೀವ್ ಅಂತ ಗಣನೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಆದ್ದರಿಂದ ಈ ವಿಚಾರದಲ್ಲಿ ಅವರಿಗೆ ಪರಿಹಾರ ಕೊಡುವುದಾದರೆ ಬೇರೆ ಒಂದು ಕಾನೂನನ್ನು ತರಬೇಕಾಗಿದೆ. ಒಂದು ಮಸೂದೆಯನ್ನು ತರಬೇಕಾಗುತ್ತದೆ. ಅದನ್ನು ಸರ್ಕಾರ ಆಲೋಚನೆ ಮಾಡುತ್ತಾ ಇದೆ.

ಶ್ರೀ ಎಚ್. ಎನ್. ನಂಜೇಗೌಡ.—ಸ್ವಾಮಿ ನಮ್ಮ ಅಕ್ಕಪಕ್ಕದ ರಾಜ್ಯಗಳಲ್ಲಿ ಇದನ್ನು ರಜಾ ಅಂತ ಮಾಡಿ ಅವರ ಸರ್ವೀಸ್‌ಗೆ ತೊಂದರೆಯಾಗದ ರೀತಿಯಲ್ಲಿ ಮಾಡಿದ್ದಾರೆ ನೀವೇಕೆ ಆ ರೀತಿ ಮಾಡಬಾರದು ? ತಾವು ಆ ರೀತಿ ಮಾಡುವುದಾದರೆ ಅವರ ಸರ್ವೀಸ್ ಕಂಡೀಷನ್‌ಗೆ ತೊಂದರೆಯಾಗುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರ ಸರ್ವೀಸ್‌ಗೆ ತೊಂದರೆಯಾಗುತ್ತದೆ. ಆದರೆ ಬೇರೆ ರಾಜ್ಯಗಳಲ್ಲಿ ಏನು ಮಾಡಿದ್ದಾರೆ ಎಂಬ ಬಗ್ಗೆ ಮಾಹಿತಿ ತರಿಸುತ್ತಾ ಇದ್ದೇವೆ. ನಮ್ಮ ಕಾನೂನು ಏನಿದೆ ಅದರ ಪ್ರಕಾರ ಈ ವಿಚಾರವನ್ನು ನ್ಯಾಯಶಾಖೆಯವರು ಆಲೋಚನೆ ಮಾಡಿ ಅವರಿಗೆ ರಿಯಾಯಿತಿ ಕೊಡುವುದಕ್ಕೆ ಈಗ ಅಧಿಕಾರವಿಲ್ಲ ಎಂದು ಅಭಿಪ್ರಾಯಪಟ್ಟಿದ್ದಾರೆ. ಆ ಅಭಿಪ್ರಾಯಕ್ಕೆ ಸುಪ್ರೀಂ ಕೋರ್ಟಿನ ತೀರ್ಮಾನಗಳೇ ಆಧಾರ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಎನ್. ಜಿ. ಓ. ಗಳು ಯಾವ ಉದ್ದೇಶಕ್ಕೆ ಸ್ಟೈಕ್ ಮಾಡಿದರೋ ಆ ಉದ್ದೇಶ ನೆರವೇರಿ ಕೇಂದ್ರ ಸರ್ಕಾರವು ತುಟ್ಟಿಭತ್ಯವನ್ನು ಕೊಟ್ಟಿದ್ದೀರಿ ತಮ್ಮ ಕೈ ಕೆಳಗೆ ಕೆಲಸಮಾಡುತ್ತಿರುವವರಿಗೆ ಅನುಕೂಲವಾಗುವ ರೀತಿಯಲ್ಲಿ ಈ ವಿಷಯವನ್ನು ತಾವು ಪರಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಿಗೆ ಈ ನೌಕರರ ವಿಚಾರದಲ್ಲಿ ಎಷ್ಟು ಸಹಾನುಭೂತಿ ಇದೆಯೋ ಅದಕ್ಕಿಂತಲೂ ಹೆಚ್ಚು ಸಹಾನುಭೂತಿ ಸರ್ಕಾರದವರಿಗೆ ಇದೆ. ಈಗ ಬಂದಿರುವ ಪ್ರತಿಬಂಧ ಕಾನೂನು.

ಶ್ರೀ ಎಚ್. ಡಿ. ದೇವೇಗೌಡ.—ಕ್ಯಾಷ್ಯುಯರ್ ಲೀವ್ ಆಗಿ ಟ್ರೀಟ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು ಅವರಿಗೆ ಇರತಕ್ಕ ಹಕ್ಕಿನ ರಜ—ಆರ್‌ನ್ಡ್ ಲೀವ್–ಏನಿದೆ ಅದನ್ನು ಸಂಬಂಧಪಟ್ಟ ನೌಕರರಿಗೆ ಈ ಮೂರು ದಿವಸಗಳಿಗೆ ಕೊಡುವುದಕ್ಕೆ ಏಕೆ ಸಾಧ್ಯವಿಲ್ಲ ?

ಶ್ರೀ ಎಸ್. ನಿಜಲಿಂಗಪ್ಪ.—ಇದು ಪೀನಲ್ ರಾ, ಅದ್ದರಿಂದ ಆ ರೀತಿ ಮಾಡುವುದಕ್ಕಾಗುವುದಿಲ್ಲ ಎಂದು ಅವರಿಂದ ಅಭಿಪ್ರಾಯ ಬಂದಿದೆ.

ಶ್ರೀ ಹೆಚ್. ಆರ್. ರಂಗೇಗೌಡ.—ಹಿಂದೆ ಒಂದು ಸಾರಿ ರೋಕೋಪಯೋಗಿ ಇರಾಖೆಯ ಜ್ಯೂನಿಯರ್ ಇಂಜನಿಯರುಗಳು ಸ್ಟೈಕ್ ಮಾಡಿದಾಗ ಕನಿಕರ ತೋರಿಸಿದ್ದೀರಿ. ಅದೇ ರೀತಿ ಇವರಿಗೂ ಏಕೆ ತೋರಿಸಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಆ ಕನಿಕರ ಆಗಲೂ ಇತ್ತು, ಈಗಲೂ ಇದೆ. ಅವರಿಗೆ ಸಂಬಂಧಪಟ್ಟಂತೆ ಒಂದು ಕಾನೂನು ಇದೆ. ಆ ಕಾನೂನು ಪ್ರಕಾರ ಹೇಗೆ ನಡೆಯಬೇಕು ಎಂಬುದು ಈಗಿರುವ ಪ್ರಶ್ನೆ ಮತ್ತು ವಿಚಾರ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಕಾನೂನು ಪ್ರತಿಬಂಧಕ ಮಾಡಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದರು ಮತ್ತು ಅದನ್ನು ತಿದ್ದುಪಡಿಮಾಡುವುದಕ್ಕೆ ಮನಸೂದೆಯನ್ನು ತರುತ್ತೇವೆ ಎಂದು ಹೇಳಿದರು. ಅದನ್ನು ಯಾವಾಗ ತರುತ್ತೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಸರ್ಕಾರ ಪರ್ಯಾಲೋಚನೆ ಮಾಡುತ್ತಾ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಕಾನೂನಿನ ತೊಡಕು ಒಂದೇನೋ ಅಥವಾ ಬೇರೆ ಇನ್ನೂ ಏನಾದರೂ ತೊಂದರೆ—ರಾಜಕೀಯ ಏನಾದರೂ ಇದೆಯೋ ?

ಶ್ರೀ ಎಸ್. ನಿಜಲಿಂಗಪ್ಪ.—ನನಗೆ ತಿಳಿದಮಟ್ಟಿಗೆ ಕಾನೂನು ಒಂದೇ. ಮಾನ್ಯ ಸದಸ್ಯರಿಗೆ ಇನ್ನೂ ಏನೇನು ತಿಳಿದಿದೆಯೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಕಾನೂನು ಪ್ರಕಾರ ಈ ಗೈರು ಹಾಜರಿಯನ್ನು ಕ್ಯಾಷ್ಯುಯಲ್ ಲೀವ್ ಆಗಿ ಪರಿಗಣಿಸುವುದಕ್ಕೆ ಸಾಧ್ಯವಿಲ್ಲ ಎಂದು ಫೇಳಲಾಯಿತು. ಗೈರು ಹಾಜರಿಯನ್ನು ಕಾಷ್ಯುಯಲ್ ಲೀವ್ ಅಂತ ಟ್ರೀಟ್ ಮಾಡದೇ ಇರುವುದರಿಂದ ಇನ್‌ಕ್ರಿಮೆಂಟ್ ಪ್ರಶ್ನೆ ಮತ್ತು ರಜಾ ತೆಗೆದುಕೊಳ್ಳುವ ಪ್ರಶ್ನೆ ಇದರಲ್ಲಿ ಅಧಿಕಾರಿಗಳಿಗೆ ಅನ್ಯಾಯವಾಗುತ್ತಿದೆ ಎಂಬುದು ಗೊತ್ತೇ ?

ಶ್ರೀ ಎಸ್. ನಿಜಲಿಂಗಪ್ಪ.—ಆಗಲೇ ಉತ್ತರ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ಮುಷ್ಕರದ ಸಂದರ್ಭದಲ್ಲಿ ಕೆಲವು ಎನ್. ಜಿ. ಓ. ಗಳು ಮತ್ತು ಇತರರ ಮೇಲೆ ಕೇಸು ಹಾಕಲಾಗಿತ್ತು : ಅದರಲ್ಲಿ ಎಲ್ಲಾ ಕೇಸುಗಳನ್ನೂ ವಾಪಸು ತೆಗೆದು ಕೊಂಡಿದ್ದೀರಾ ? ಎನ್. ಜಿ. ಓ. ಸಂಘದ ಅಧ್ಯಕ್ಷೆ ಮೇರಿ ದೆವಾಸಿಯಾ ಮತ್ತು ಇತರ ಮೂರು ಜನರ ಮೇಲೆ ಏನು ಕೇಸು ಹಾಕಿದ್ದೀರಿ, ಅದನ್ನ ವಾಪಸು ತೆಗೆದುಕೊಂಡಿದ್ದೀರಾ ಅಥವಾ ತೆಗೆದು ಕೊಳ್ಳತ್ತೀರಾ ಎಂಬುದನ್ನು ಹೇಳುವುದಕ್ಕಾಗುತ್ತದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಕೇಸು ವಾಪಸು ತೆಗೆದುಕೊಳ್ಳುವುದಕ್ಕೆ ಅವರು ಏನು ಕೇಳಿದ್ದಾರೆಯೋ' ಸರ್ಕಾರಕ್ಕೆ ಏನು ಅರ್ಜಿ ಕೊಟ್ಟಿದ್ದಾರೆಯೋ ಅದರ ಮೇಲೆ ಅನ್ವಯವಾಗುತ್ತದೆ.

ಶ್ರೀ ಕೆ. ಪಿ. ಚಿಕ್ಕೇಗೌಡ.—ಕಾನೂನಿನ ಪ್ರತಿಬಂಧಕ ಇದೆ ಅದನ್ನು ನಿವಾರಣೆ ಮಾಡಲಿಕ್ಕೆ ಮನಸೂದೆಯನ್ನು ತರಬೇಕು, ಯೋಜನೆ ಮಾಡಲಾಗುತ್ತಿದೆ ಎಂದು ಹೇಳಿದಿರಿ. ಈ ಅಧಿವೇಶನದಲ್ಲೇ ಏಕೆ ಅದಕ್ಕೆ ಒಂದು ತಿದ್ದುಪಡಿಯನ್ನು ತರಬಾರದು ?

ಶ್ರೀ ಎಸ್. ನಿಜಲಿಂಗಪ್ಪ.—ಅದಕ್ಕೆ ಜವಾಬು ಹೇಳಿದ್ದೇನೆ.

ಶ್ರೀ ಎನ್ ಎ. ಚನ್ನೆಗೌಡ—ತಮಗೆ ನೌಕರರಲ್ಲಿ ಸಹಾನುಭೂತಿ ಇರುವುದನ್ನು ತೋರಿಸುವುದಕ್ಕೆ ಈ ಅಧಿವೇಶನದಲ್ಲೇ ಕಾನೂನಿಗೆ ತಿದ್ದುಪಡಿಯನ್ನು ತರುವ ಭರವಸೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿದೆ ಎಂದು ಆಗಲೇ ತಿಳಿಸಿದ್ದೇನೆ.

Sri B. P. KADAM.—Will the Chief Minister have mercy for the NGOs. Is he aware of the sane advice of Shakespeare ?

> "The quality of mercy is not strained ;
> It poureth as gentle rain from Heaven ;
> It blesseth him that gives ;
> It blesseth him that takes."

Sri S. NIJALINGAPPA.—I congratulate him on his scholarship and study of literature so far as Shakespeare is concerned. I quite appreciate it.

ಶ್ರೀ ವಾಟಳ್ ನಾಗರಾಜ್.—ಎನ್. ಜಿ. ಓ. ಗಳ ಸಂಘಟನೆಯನ್ನು ಮುರಿಯಲು ಸರ್ಕಾರ ಆ ಹೈಕಿ ಕೆಲವರಿಗೆ ಭಡ್ತಿ ಕೊಡುತ್ತೇವೆಂದು ಹೇಳಿದ್ದಿರಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.— ಇದು ಅರ್ಥವಿಲ್ಲದ ಆರೋಪಣೆ.

ಶ್ರೀ ಎಸ್. ಶಿವಪ್ಪ.—ಅವರ ಸಂಬಳವನ್ನು ಕೊಡುವುದಕ್ಕೆ ಕಾನೂನಿನ ಅಡಚಣೆ ಇದೆಯೆಂದು ಉತ್ತರ ಕೊಟ್ಟಿದ್ದಾರೆ. ಸರ್ಕಾರಕ್ಕೆ ಇರತಕ್ಕ ಹೈರೆಸಿಡ್ಯುಯಲ್ ಪವರ್ ಮೂಲಕ ಒಂದು ಇಂಟೆರಿಂ ಆರ್ಡರ್‌ನ್ನು ಹೊರಡಿಸಿ ಅದನ್ನು ಕೂಡಲೇ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಶಿವಪ್ಪನವರು ನನಗೆ ಅಂಥಾ ಹೈರೆಸಿಡ್ಯುಯರಿ ಪವರ್ ಇದೆ ಯೆಂಬುದನ್ನು ತೋರಿಸಿದರೆ ಅಂಥ ಅರ್ಜಿಗಳನ್ನು ಹೊರಡಿಸುವುದಕ್ಕೆ ಏರ್ಪಾಡುಮಾಡೋಣ.

ಶ್ರೀ ಎಚ್. ಎನ್. ನಂಜೇಗೌಡ.—ಕೆಲಸದಿಂದ ತೆಗೆದು ಹಾಕಿದ್ದವರನ್ನೆಲ್ಲಾ ಪುನಃ ಕೆಲಸಕ್ಕೆ ತೆಗೆದು ಕೊಳ್ಳಲಾಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಎಲ್ಲರನ್ನೂ ಕೆಲಸಕ್ಕೆ ತೆಗೆದುಕೊಳ್ಳಲಾಗಿದೆ.

ಶ್ರೀ ಕೆ. ಎಚ್. ಪಾಟೀಲ್.—3 ದಿವಸ ಅವರು ಗ್ಯೆರುಹಾಜರಾದುದನ್ನು ಬ್ರೀಚ್ ಆಫ್ ರೂಲ್ ಅಂತ ಅವರ ಸಂಬಳವನ್ನು ಹಿಡಿದಿದ್ದಾರೆ. ಆದರೆ ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡಿದ್ದು ಬ್ರೀಚ್ ಆಫ್ ರೂಲ್ ಆಗುವುದಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಅವರು ಕಾನೂನನ್ನು ತಪ್ಪಾಗಿ ಅರ್ಥಮಾಡಿಕೊಂಡಿದ್ದಾರೆ. ಅವರನ್ನು ನಾವು ಕೆಲಸಕ್ಕೆ ತೆಗೆದುಕೊಳ್ಳಲೇ ಬೇಕಾಗಿತ್ತು, ತೆಗೆದುಕೊಂಡಿದ್ದೇವೆ.

ಶ್ರೀ. ಎ. ಆರ್. ಬದರಿನಾರಾಯಣ.—ಪದೇ ಪದೇ ಇಂಥಾ ತೊಂದರೆಗಳು ಬಾರದಿರುವಂತೆ ಇದನ್ನು ತಪ್ಪಿಸುವುದಕ್ಕೇನು ಶಾಶ್ವತವಾದ ಕ್ರಮವನ್ನು ಕೈಗೊಂಡಿದ್ದೀರಿ ?

ಶ್ರೀ ಎಸ್. ನಿಜಲಿಂಗಪ್ಪ.—ಪೇ ಕಮಿಷನ್ನನ್ನು ನೇಮಕ ಮಾಡಿದ್ದೇವೆ. ಅವರು ಈಗಾಗಲೆ ಕೆಲವು ಶಿಫಾರ್ಸುಗಳನ್ನು ಮಾಡಿದ್ದಾರೆ. ಅದನ್ನು ನಾವು ಜಾರಿಗೆ ಕೊಟ್ಟಿದ್ದೇವೆ. ಅವರ ಪೂರ್ಣ ವರದಿ ಇನ್ನೂ ಬಂದಿಲ್ಲ ಬಂದ ನಂತರ ಅದನ್ನು ಪರಿಶೀಲಿಸಲಾಗುತ್ತದೆ.

ಶ್ರೀ ಎಸ್. ಎಸ್. ಕೆಟ್ಟರ್.— ಆ 3 ದಿನಗಳ ಗ್ಯೆರಾಜರಿಯ ಬಗ್ಗೆ ಅವರು ರಜೆ ಅರ್ಜಿಯನ್ನು ಸಲ್ಲಿಸಿದ್ದರು. ಆ ಅರ್ಜಿಗಳ ಮೇಲೆ ಏನು ಆಜ್ಞೆ ಮಾಡಲಾಗಿದೆ ?

ಶ್ರೀ ಎಸ್. ನಿಜಲಿಂಗಪ್ಪ.—ಕಾನೂನು ಪ್ರಕಾರ ಏನು ಮಾಡಬೇಕೋ ಅದನ್ನು ಮಾಡಿದೆ.

ಶ್ರೀ ಅಜೀಜ್ ಸೇಠ್.—ಕಾನೂನು ತಿದ್ದುಪಡಿ ಮಾಡುವುದಕ್ಕೆ ತಾವು ಆಲೋಚನೆ.....

ಅಧ್ಯಕ್ಷರು.—ನಾನಲ್ಲ, ಸರ್ಕಾರ ಮಾಡುವುದು. ಸರ್ಕಾರದವರು ಎಂದು ಹೇಳಿ.....

ಶ್ರೀ ಅಜೀಜ್ ಸೇಠ್.—ಅವರಿಗೆ ಸಹಾಯ ಮಾಡಬೇಕೆಂದಿದ್ದರೆ. ಕೂಡಲೆ ಕಾರ್ಯಕ್ರಮ ಕೈಗೊಳ್ಳುತ್ತಾರೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಇಂಥ ಪ್ರಶ್ನೆಗಳಿಗೆ ಜವಾಬ್ ಕೊಡುವುದು ಬಹಳ ಕಷ್ಟ.

ಶ್ರೀ ಅಜೀಜ್ ಸೇಠ್.—ತಾವು ಈಗ ತಾನೆ ಈ ಹೌಸಿನಲ್ಲಿ ರೂಲ್ಸ್‌ನ್ನು ಅಮೆಂಡ್ ಮಾಡುವುದಕ್ಕೆ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದಿರಿ. ಅದನ್ನು ಸತ್ಯ ಧರ್ಮದಿಂದ ಮಾಡುತ್ತೇವೆಂದು ಭರವಸೆ ಕೊಡುತ್ತೀರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅವರ ವಿಚಾರದಲ್ಲಿ ಆ ಸಹಾನುಭೂತಿ ಇದ್ದುದರಿಂದಲೇ ಮಾಡುತ್ತೇವೆಂದು ಹೇಳಿದ್ದೇನೆ.

ಶ್ರೀ ಸಿದ್ದಯ್ಯ ಕಾಶಿಮಠ.—ನಾನ್‌ಗೆಜೆಟೆಡ್ ನೌಕರರು ತಮ್ಮ ಹಕ್ಕಿನ ರಜೆ ಮಂಜೂರು ಮಾಡಬೇಕೆಂದು ಕೇಳಿದ್ದರೆ ಅದನ್ನು ಸರ್ಕಾರ ನಿರಾಕರಿಸಿದ್ದು ಸರಿಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಕಾನೂನು ಪ್ರಕಾರ ಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಕೇರಳ ಮತ್ತು ಉತ್ತರಪ್ರದೇಶದಲ್ಲಿ 14 ದಿನಗಳ ಗ್ಯೆರಾಜರಿಯನ್ನು ಈಗಾಲೇ ಡಿಸೈಡ್ ಮಾಡಿದ್ದರೆ ಇಲ್ಲಿ ಮೂರು ದಿನಗಳಿಗೇಕೆ ಇನ್ನೂ ತಡವಾಗಿದೆ ?

ಶ್ರೀ ಎಸ್ ನಿಜಲಿಂಗಪ್ಪ.— ಮಾನ್ಯ ಸದಸ್ಯರ ಸಹಾನುಭೂತಿಯನ್ನು ನಾನು ಒಪ್ಪುತ್ತೇನೆ. ಆದರೆ ಮೈಸೂರಿನಲ್ಲಿ ಕಾನೂನಿನ ಪ್ರತಿಬಂಧಕಾಜ್ಞೆ ಇನ್ನೂ ಇಲ್ಲಿ ಜಾರಿಯಲ್ಲಿದೆ. ಅಲ್ಲಿಲ್ಲ. ಆದುದರಿಂದ ಇಲ್ಲಿ ನಿಧಾನವಾಗಿದೆ.

ಶ್ರೀ ಎ. ಮುನಿಯಪ್ಪ.—ಒಂದು ಸಮಿತಿಯನ್ನು ಮಾಡರಾಗಿದೆ ಎಂದು ಹೇಳಿದ್ದಾರೆ. ಆ ಸಮಿತಿ ತನ್ನ ವರದಿಯನ್ನು ಒಪ್ಪಿಸುವುದಕ್ಕೆ ಕಾಲ ಮಿತಿಯನ್ನು ಹಾಕಲಾಗಿದೆಯೇ ?

ಶ್ರೀ ಎಸ್. ನಿಜಲಿಂಗಪ್ಪ.—ಆದಷ್ಟು ಜಾಗ್ರತೆ ವರದಿಯನ್ನು ಕೊಡುತ್ತಾರೆಂಬ ಭರವಸೆ ಇದೆ.

ಶ್ರೀ ಎ. ಮುನಿಯಪ್ಪ.—ಇಷ್ಟೇ ದಿನಗಳಲ್ಲಿ ವರದಿಯನ್ನು ಒಪ್ಪಿಸಬೇಕೆಂದು ನಿಗದಿ ಮಾಡಿಲ್ಲವೆ ?

ಶ್ರೀ ಎಸ್. ನಿಜಲಿಂಗಪ್ಪ.—ಆ ಸಮಿತಿಯ ಅಧ್ಯಕ್ಷರು ಹೈಕೋರ್ಟಿನ ಜಡ್ಜ್ ಇದ್ದಾರೆ. ಅವರು ಬೇಗ ವರದಿಯನ್ನು ಒಪ್ಪಿಸುತ್ತಾರೆಂಬ ಭರವಸೆ ನಮಗಿದೆ.

ಶ್ರೀ ಎನ್. ಲೋಕಮ್ಮ ನಾಯಕ್.—3 ದಿನಗಳು ಗೈರಾಜರಿಯಲ್ಲಿದ್ದವರಿಗೆ ರಜೆ ಕೊಡ ಕೂಡದೆಂದು ಕಾನೂನು ಇದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಇದಕ್ಕಾಗಲೇ ಮೂರಾವರ್ತಿ ಉತ್ತರ ಕೊಟ್ಟಿದ್ದೇನೆ.

ಶ್ರೀ ಪಿ. ವಿ. ಐತಾಳ.—ಇದನ್ನು ಕಂಡೋನ್ ಮಾಡುವುದಕ್ಕೆ ಡ್ರಾಫ್ಟ್ ರೂಲ್‌ನ್ನು ಮಾಡಲಾಗಿದೆ ಎಂದು ಹೇಳಿದ್ದಾರೆ. ಅದು ಲೀಗಲ್ ಸ್ಕ್ರೂಟಿನಿಗೆ ಹೋಗಿದೆಯೇ, ಒಂದು ದಿನ ಅಂಥ ಒಂದು ದೊಡ್ಡ ಕಾನೂನನ್ನು ಮಾಡುವುದು ಇದನ್ನು ಮಾಡುವುದಕ್ಕೇಕೆ ತಡ?

ಶ್ರೀ ಎಸ್. ನಿಜಲಿಂಗಪ್ಪ.—ಅದು ಸದಸ್ಯರ ಅಭಿಪ್ರಾಯದ ಮಾತು.

ಶ್ರೀ ಎಂ. ಎಸ್. ಕೃಷ್ಣನ್.—ಯಾರನ್ನೂ ವಜಾ ಮಾಡಿಲ್ಲ, ಎಲ್ಲರನ್ನೂ ಕೆಲಸಕ್ಕೆ ತೆಗೆದು ಕೊಳ್ಳಲಾಗಿದೆ ಎಂದು ಹೇಳಿದ್ದಾರೆ. ಆದರೆ ಎನ್. ಜಿ. ಓ. ಸಂಘದ ಅಧ್ಯಕ್ಷರಾದ ಶ್ರೀಮತಿ ಮೇರಿ ದಿವೇಶಿಯಾ ಅವರನ್ನು ಕೆಲಸಕ್ಕೆ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ನೋಡಿ ಹೇಳಬೇಕಾಗುತ್ತದೆ.

Project Works in Gauribidanur Taluk

*Q.—78 Sri R. N. LAKSMIPATHI (Gauribidanur).—

Will the Minister for Public Works be pleased to state :—

(*a*) the number of Project Works in Gauribidanur Taluk that are stopped by the PWD because of technical defects in the Project ;

(*b*) which are those Projects and since when the work on those Projects was stopped ;

(*c*) whether the technical defects found, are due to faulty investigation and if so, show many of them and the names of the Projects ?

A.—Sri ALUR HANUMANTHAPPA (Deputy Minister for Minor Irrigation).—

(*a*) 5.

(*b*) 1. Constructing an anicut at the junction of the waste weir halla of Sonnagana Halli Tank and Nerlehalla and to open a feeder channel to Hosur Kanvikere.	Work stopped from 7/65.
2. Constructing an anicut near Viramahalli and opening a Feeder Channel to Gadre Tank.	Work stopped from 4/65.
3. Feeder channel to Sonaganahalli from river Kumadavathi.	Work stopped from 5/65.
4. Constructing a pick up across River Kumadavathi near Alipur.	Work stopped from 5/64.
5. Construction of pick up across Nerlehalla near Bommasettihalla.	Work stopped from 2/65.

(*c*) In all the cases except feeder Channel to Sonaganahalli tank from Kumudavathi river, it is found the estimates are based on inadequate investigations and consequently the works have not been safe